ಶ್ರೀ ಸಿ. ಜೆ. ಮುಕ್ಕಣ್ಣಪ್ಪ.—ರಾಜ್ಯಾದ್ಯಂತ ಕೆಲವು ಕಡೆಗಳಲ್ಲಿ ನೀಲಗಿರಿ ಗಿಡವನ್ನೂ ಕೂಡ ಹಾಕಿದ್ದಾರೆ. ಇವರು ಇನ್ನೂ ಟೀಕ್ ಮತ್ತು ಹೊನ್ನೆ ಮರಗಳನ್ನು ಹಾಕಲಿಕ್ಕೆ ಪ್ರಯತ್ನ ಮಾಡಲಿಲ್ಲ. ಕೋಲಾರ ಜಿಲ್ಲೆಯಲ್ಲಿ ಟೀಕ್, ಹೊನ್ನೆ ಮತ್ತು ಕರೀಮರಗಳನ್ನು ಬೆಳೆಸುವುದಕ್ಕೆ ಅವಕಾಶವಿದೆಯಲ್ಲವೇ ?

ಶ್ರೀ ಬಿ. ರಾಚಯ್ಯ.—ಎಲ್ಲಾ ಜಾಗಗಳಲ್ಲಿಯೂ ಆ ರೀತಿ ಬೆಳೆಯುವುದಕ್ಕಾಗುವುದಿಲ್ಲ. ಅದು ಸಾಧ್ಯವೂ ಇಲ್ಲ. ಹುಣಿಸೆ ಮತ್ತು ಕ್ಯಾಷುರೀನ ಮರಗಳನ್ನು ಅಲ್ಲಿ ಬೆಳೆಯುತ್ತಾರೆ. ಯಾವ್ಯಾವ ಜಾಗದಲ್ಲಿ ಯಾವ್ಯಾವ ಮರಗಳನ್ನು ಹೆಚ್ಚಾಗಿ ಬೆಳೆಯುವುದಕ್ಕೆ ಸಾಧ್ಯವೋ ಅಲ್ಲಲ್ಲಿ ಆಯಾ ಮರಗಳನ್ನು ಬೆಳೆಯುತ್ತಾರೆ. ಟೀಕ್ ಮರವನ್ನು ಬ್ಯಾರನ್ ಪ್ರದೇಶದಲ್ಲಿಯೂ ಬೆಳೆಯುತ್ತಾರೆ.

ಶ್ರೀ ಅಂದಾನಯ್ಯ.—ಕಾಡು ಬೆಳೆಸುವುದು ಸರ್ಕಾರ ಹಣ ಗಳಿಸುವ ಉದ್ದೇಶವೇ ?

ಶ್ರೀ ಬಿ. ರಾಚಯ್ಯ.—ಮರಗಳನ್ನು ಬೆಳೆಸುವುದು ಸಾಯಲ್ ಕನ್‌ಸರ್‌ವೇಷನ್ ಮತ್ತು ನೀರು ಕೋಡಿ ಹೋಗದೇ ಇರುವ ಉದ್ದೇಶದಿಂದ. ಹಣವನ್ನು ಸರ್ಜಾರ ಗಳಿಸುವ ಉದ್ದೇಶವೇನೂ ಇಲ್ಲ. ಆಲ್ಲದೆ ಸುಮ್ಮನೆ ಹಣವನ್ನು ಸರ್ಕಾರ ಖರ್ಚುಮಾಡುವುದೇನೂ ಇಲ್ಲ. ಅಷ್ಟು ಸುಲಭವಾಗಿ ಈ ಅಸೆಂಬ್ಲಿಯಲ್ಲಿ ಮುಂಜೂರುಮಾಡುವುದಿಲ್ಲ.

Collection of National Defence Fund.

*Q.—89. SRI VEERABHADRAPPA ERAPPA (Yelburga).—

Will the Government be pleased to state :—

(*a*) whether it has come to their notice that Tahsildars of Koppal and Yelburga Taluks in Raichur District had entrusted the collection work of the National Defence Fund to the Village Officers ;

(*b*) the number of Village Officers who have submitted accounts of the collection made by them to the concerned Taluk Office ;

(*c*) whether any complaints have been received by them to the effect that certain Village Officers have not yet given their proper accounts in this behalf ?

A.—SRI VEERENDRA PATIL (Minister for Public Works) [on behalf of SRI S. NIJALINGAPPA (Chief Minister)].—

(*a*) Yes.

(*b*) (i) In Yelburga Taluk all Village Officers have rendered accounts.

(ii) In Koppal Taluk 146 Village Officers have rendered accounts.

(*c*) One such complaint was received from Koppal Taluk and the matter is under enquiry.

ಶ್ರೀ ವೀರಭದ್ರಪ್ಪ ಈರಪ್ಪ.—ಯಾವ್ಯಾವ ತಾಲ್ಲೂಕುಗಳಲ್ಲಿ ಎಷ್ಟೆಷ್ಟು ಹಣ ವಸೂಲುಮಾಡಲಾಗಿದೆ ?

†ಶ್ರೀ ವೀರೇಂದ್ರ ಪಾಟೀಲ್.—ಎಷ್ಟು ಹಣ ವಸೂಲು ಮಾಡಿದ್ದಾರೆಂಬ ಬಗ್ಗೆ ನನ್ನಲ್ಲಿ ಮಾಹಿತಿ ಇಲ್ಲ. ಅದಕ್ಕೆ ನೋಟೀಸ್ ಬೇಕು.

ಶ್ರೀ ವೀರಭದ್ರಪ್ಪ ಈರಪ್ಪ.—ಆ ಹಣವನ್ನು ವಸೂಲು ಮಾಡುವುದಕ್ಕೆ ಗ್ರಾಮಸ್ಥರಿಗೆ ಅಧಿಕಾರ ಕೊಟ್ಟಿರುವುದರಿಂದ ಅವರು ಹಣವನ್ನು ಪಡೆದಿರುವ ಬಗ್ಗೆ ಫೈನಲ್ ರಸೀದಿಗಳನ್ನಾಗಲೀ ಅಥವಾ ಟೆಂಟೇಟಿವ್ ರಸೀದಿಗಳನ್ನಾಗಲೀ ಕೊಡಬೇಕೆಂದು ಸೂಚನೆಗಳನ್ನು ಸರ್ಕಾರದವರು ಕೊಟ್ಟಿಲ್ಲವೆ ?

ಶ್ರೀ ವೀರೇಂದ್ರ ಪಾಟೀಲ್.—ಕೆಲವು ಕಡೆಗಳಲ್ಲಿ ರಕ್ಷಣಾ ನಿಧಿಗಾಗಿ ವಸೂಲುಮಾಡಬೇಕೆಂದು ಸೂಚನೆಗಳು ಹೋಗಿಲ್ಲ. ಆದರೆ ಲೋಕಲ್ಲಾಗಿ ಪ್ರತಿಯೊಂದು ಕಡೆಯೂ ರಾಷ್ಟ್ರೀಯ ರಕ್ಷಣಾ ನಿಧಿಗಾಗಿ ಪಂಚಾಯತಿ ಕಮಿಟಿಗಳು ಹಣವನ್ನು ವಸೂಲು ಮಾಡುತ್ತಿದ್ದರು. ಯಾರ್ಯಾರು ಅದನ್ನು ವಸೂಲುಮಾಡುತ್ತಾರೋ ಅವರು

(ಶ್ರೀ ವೀರೇಂದ್ರ ಪಾಟೀಲ್)

ಅದರ ಒಂದು ಪಟ್ಟಿ ಹಾಗೂ ರಸೀದಿಗಳನ್ನು ಕೊಡಬೇಕೆಂದು ಹೇಳಿದ್ದೆವು. ಆ ಪ್ರಕಾರ ಕೆಲವು ಕಡೆಗಳಲ್ಲಿ ಶ್ಯಾನುಭೋಗರೂ ಮತ್ತು ಪಟೇಲರೂ ಕೂಡ ಆ ರೀತಿ ವಸೂಲು ಮಾಡಬೇಕೆಂದು ಹೇಳಿದೆ.

ಶ್ರೀ ವೀರಭದ್ರಪ್ಪ ಈರಪ್ಪ.—ಕೊಪ್ಪಳ ತಾಲ್ಲೂಕಿನಿಂದ ಒಂದು ದೂರು ಬಂದಿದೆ ಮತ್ತು ಆ ವಿಷಯದ ಬಗ್ಗೆ ವಿಚಾರಣೆ ಮಾಡಲಾಗುತ್ತಿದೆ ಎಂದು ಹೇಳಿದ್ದೀರಿ, ಆ ದೂರು ಯಾವ ಊರಿನಿಂದ ಬಂದಿದೆ, ಎಷ್ಟು ದಿವಸಗಳಿಂದ ಅದನ್ನು ವಿಚಾರ ಮಾಡುತ್ತಿದ್ದೀರಿ ?

ಶ್ರೀ ವೀರೇಂದ್ರ ಪಾಟೀಲ್.—ದೂರು ಎಂದು ಬಂದಿದೆ ಎಂದು ಹೇಳುವುದಕ್ಕಾಗುವುದಿಲ್ಲ. ಆ ಡೇಟು ಈಗ ನನ್ನ ಹತ್ತಿರ ಇಲ್ಲ. ದೂರು ಬಂದಿದೆ. ಅದನ್ನ ಪೋಲೀಸಿನವರು ತನಿಖೆ ಮಾಡುತ್ತಿದ್ದಾರೆ. ಅವರು ತಪ್ಪಿತಸ್ಥರು ಎಂದು ಕಂಡು ಬಂದರೆ ಅವರನ್ನು ಪ್ರಾಸಿಕ್ಯೂಟ್ ಮಾಡುತ್ತಾರೆ.

ಶ್ರೀ ಎಸ್. ಗೋಪಾಲ ಗೌಡ.—ಕೊಪ್ಪಳ ತಾಲ್ಲೂಕಿನಲ್ಲಿ ಯಾವ ಊರಿನಿಂದ ಯಾರ ವಿರುದ್ಧ ದೂರು ಬಂದಿದೆ ?

ಶ್ರೀ ವೀರೇಂದ್ರ ಪಾಟೀಲ್.—ಗುಡ್ಲಾನೂರು ಮಾಲಿಪಾಟೀಲ ಎಂಬುವರ ಮೇಲೆ ದೂರು ಬಂದಿದೆ.

ಶ್ರೀ ಎಸ್. ಗೋಪಾಲ ಗೌಡ.—ರಕ್ಷಣಾ ನಿಧಿಗೆ ಸಾರ್ವಜನಿಕರಿಂದ ಹಣವನ್ನು ವಸೂಲು ಮಾಡುವಾಗ ಇಂಥಾ ಆಫೀಸರೇ ರಸೀತಿ ಪುಸ್ತಕವನ್ನು ಹೊಂದಿರಬೇಕು, ಇಂಥಾ ಆಫೀಸರೇ ರಸೀತಿಯನ್ನ ಕೊಟ್ಟು ರಕ್ಷಣಾ ನಿಧಿಯನ್ನು ವಸೂಲು ಮಾಡಬೇಕೆಂದು ಕಾನೂನು ಇರುವಾಗ ಯಾರು ಬೇಕಾದರೂ ರಸೀತಿ ಪುಸ್ತಕವನ್ನು ಅಚ್ಚು ಹಾಕಿಸಿಕೊಂಡು ರಕ್ಷಣಾನಿಧಿಗೆ ಹಣವನ್ನು ವಸೂಲು ಮಾಡಬಹುದೇ ?

ಶ್ರೀ ವೀರೇಂದ್ರ ಪಾಟೀಲ್.—ರಸೀತಿ ಪುಸ್ತಕವನ್ನು ಅಚ್ಚು ಹಾಕಿಸಿಕೊಂಡು ಯಾರು ಬೇಕಾದರೂ ರಕ್ಷಣಾ ನಿಧಿಗೆ ಹಣವನ್ನು ವಸೂಲು ಮಾಡಬಹುದು ಎಂದು ನಾನು ಹೇಳಲಿಲ್ಲ.

Vigilance Commissioner's Report

*Q.—97. SRI R. N. LAKSHMIPATHY (Gauribidanur).—

Will the Government be pleased to state :—

(*a*) whether the Vigilance Commissioner of the State has given any report to Government to effectively check corruption, after his visit to foreign countries ;

(*b*) if so, what action Government have taken on his report ?

A.—SRI VEERENDRA PATIL (Minister for Public Works) [on behalf of SRI S. NIJALINGAPPA (Chief Minister)].—

(*a*) Yes.

(*b*) The report is being examined.